**ಪಾಠ 6** **ನವೆಂಬರ್ 3 – 9**

# ಐಕ್ಯತೆಯು



## ಸಬ್ಬತ್ತಿನ ಮಧ್ಯಾಹ್ನ

**ಈ ವಾರದ ಅಧ್ಯಾಯನಕ್ಕಾಗಿ ಓದಿರಿ: 1ಪೇತ್ರ 2:9; ವಿಮೋ 19:5,6; ಎಫೆ 2:19–22, 1ಕೊರಿ 12:12–26; ಯೋಹಾನ 10:1–11 ಕೀರ್ತನೆ 23**

**ಸ್ಮರಣ ವಾಕ್ಯ "ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರವ ಅಂಗಗಳು ಅನೇಕವಾಗಿವೆಯೋ ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೋ, ಹಾಗೆಯೇ ಕ್ರಿಸ್ತನು". 1 ಕೊರಿಂಥದವರಿಗೆ 12:12.**

ಸತ್ಯವೇದವನ್ನು ಓದಿದ ಎಲ್ಲರಿಗೂ ಅದರಲ್ಲಿ ಚಿತ್ರಣ ಮತ್ತು ಚಿಹ್ನೆಗಳು ನಿಜಾಂಶವನ್ನು ಸೂಚಿಸಿತ್ತವೆ ಎಂಬುದರ ಬಗ್ಗೆ ತಿಳಿದುಕೊಂಡಿರುತ್ತಾರೆ. ಆ ನಿಜಾಂಶವು ಚಿತ್ರಣ ಮತ್ತು ಚಿಹ್ನೆಳಗಿಂತ ಹೆಚ್ಚಿನವು. ಉದಾಹರಣೆಗೆ ಸತ್ಯವೇದದಲ್ಲಿ ಬರುವ ಯಜ್ಞದ ಪದದತಿಯು ನಿಜಾಂಶದ ಗುರುತಾಗಿತ್ತು. ಅದು ಯೇಸು ಮತ್ತು ರಕ್ಷಣೆಯ ಪೂರ್ಣ ಯೋಜನೆ. ಸತ್ಯವೇದದಲ್ಲಿ ಅನೇಕ ರೀತಿಯಲ್ಲಿ ಚಿತ್ರಣ ನೀಡಲಾಗಿದೆ, ಕೆಲವೊಮ್ಮೆ ಸಾಮಾನ್ಯ ಮೂಲ ವಸ್ತುಗಳಿಂದ ನೀರು, ಬೆಂಕಿ ಮತ್ತು ಗಾಳಿ ಮೂಲಕ. ಸನ್ನಿವೇಶದ ಪ್ರಕಾರ ಇವು ಆತ್ಮೀಕ ಮತ್ತು ಥಿಯಾಲಾಜಿಯ ಸತ್ಯ ಚಿತ್ರನ ನೀಡಲಾಗಿದೆ. ಉದಾಹರಣೆ ಯೇಸು ಹೇಳಿದ್ದು. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು. ಆತ್ಮನಿಂದ ಹುಟ್ಟಿದವರೆಲ್ಲರು ಅಂತೆಯೇ

(ಯೋಹಾನ 2:8). ಗಾಳಿಯು ಪವಿತ್ರಾತ್ಮನನ್ನು ಪ್ರತಿಬಿಂಬಿಸುವ ಚಿಹ್ನೆಯಾಗಿದೆ.

ಸಭೆಯಲ್ಲಿ ಇರುವ ಐಕ್ಯತೆಯನ್ನು ವಿವರಿಸಲು ಅ ಸತ್ಯವೇದವು ಅನೇಕ ಚಿತ್ರಣಗಳನ್ನು ಉಪಯೋಗಿಸಿದೆ. ಈ ಚಿತ್ರಣಗಳು ಸಭೆಯ ಐಕ್ಯತೆಯ ಬಗ್ಗೆ ಅನೇಕ ರೀತಿಯಲ್ಲಿ ಬಿಂಬಿಸುವ ಸಭೆಯು ದೇವರೊಂದಿಗಿನ ಸಂಬಂಧ. ಸಭಿಕರಲ್ಲಿ ಸಂಬಂಧ ಸಮುದಾಯದೊಡಿಗಿನ ಸಭೆಯ ಸಂಬಂಧ.

**ಈ ವಾರದ ಪಾಠವು ಕೆಲವು ಚಿತ್ರಣಗಳನ್ನು ಏನನ್ನು ಯೇಸುವಿನೊಂದಿಗಿನ ಐಕ್ಯತೆ ಬಗ್ಗೆ ನಮಗೆ ತಿಳಿಸುತ್ತದೆ**

.

**ಬಾನುವಾರ** **ನವೆಂಬರ್** 4

**ದೇವ ಜನರು**

1ಪೇತ್ರ 2:9, ವಿಮೋ 19:5,6, ಧಮೊ 4:20, ಮತ್ತು ಧರ್ಮೋ 7:6 ಓದಿರಿ: ದೇವ ಜನರ ವಿಶೇಷ ಸ್ಥಾನ ಮಾನದ ಬಗ್ಗೆ ಈ ವಾಕ್ಯಗಳು ಏನು ಹೇಳುತ್ತವೆ?

——————————————————————————————————

ಸಭೆಯೆಂದರೆ ಜನರು, ಆದರೆ ಯಾವುದೇ ತರದ ಜನರಲ್ಲ. ಸಭೇಯು ಎಂದರೆ ದೇವ ಜನರು (ದೇವರ ಜನಾಂಗ), ದೇವರಿಗೆ ಸೇರಿದ ಜನಾಂಗ, ದೇವರನ್ನು ತಮ್ಮ ತಂದೆ ಮತ್ತು ರಕ್ಷಕ ಎನ್ನುವ ಜನೆರು. ಕ್ರಿಸ್ತನಿಂದ ಬಿಡುಗಡೆ ಪಡೆದ ಜನರು ಮತ್ತು ಆತನಿಗೆ ವಿಧಯರಾಗಿರುವ ಜನರು. ರಕ್ಷಣೆ ಯೋಜನೆಯನ್ನು ಪ್ರಾರಂಭಿಸಿದಾಗಿನಿಂದ ಲೋಕದಲ್ಲಿ ದೇವ ಜನಾಂಗವಿತ್ತು ಎಂದು ತಿಳಿಯುತ್ತದೆ. ಅದು ಹಳೆಯ ಒಡಂಬಡಿಕೆಯ ಇಸ್ರಾಯೇಲ ಜನರು ಮತ್ತು ಹೊಸ ಒಡಂಬಡಿಕೆ ಸಭೆಯ ಮದ್ಯ ಮುಂದುವರೆದಿದೆ. ಆದಮಾನ ಕಾಲದಿಂದ, ಪ್ರವಾಹದ ಮುಂಜೆಯೆ ಮತ್ತು ನಂತರದ ಹಿರಿಯರು ಮತ್ತು ಅಬ್ರಹಾಮನ ದೇವರು ತನ್ನ ಜನರು ಆತನ ಪ್ರೀತಿ, ಕರುಣೆ ಮತ್ತಯ ನ್ಯಾಯದ ಲೋಕದಲ್ಲಿ ಪ್ರತಿನಿಧಿಗಳಾಗಿ ಒಡಂಬಡಿಕೆ ಮಾಡಿಕೊಂಡಿದ್ದಾನೆ.

ದೇವ ಜನರನ್ನು ದೇವರಾದುಕೊಂಡ ಜನಾಂಗವೂ, ರಾಜ ವಂಶಸ್ಥರಾದ ಯಾಜಕರೂ ಪರಿಶುದ್ದ ಜನಾಂಗವೂ ಎಂದು ಕರೆಯಲಾಗಿದೆ, ಅವರನ್ನು ವಿಶೇಷವಾದ ಉದ್ದೇಶಕ್ಕಾಗಿ ಆರಿಸಲ್ಪಟ್ಟಿದ್ದಾರೆ ಅವರನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸದಾತನ ಗುಣಾಂಶಗಳನ್ನು ಪ್ರಚಾರಮಾಡುವುದಕ್ಕೆ ಆಯ್ದುಕೊಂಡಿದ್ದಾನೆ (1ಪೇತ್ರ 2:9). ವಿಮೋ 34:6,7 ವಾಕ್ಯಗಳಲ್ಲಿ ವಿವರಿಸಿದಂತೆ

ದೇವರ ಕೃಪಾಮಯ ಗುಣವನ್ನು ವಿವರಿಸುವ ಪ್ರತಿಧ್ವನಿಯಾಗಿದೆ.

"ದೇವರು ಸಭೆಯನ್ನು ತನ್ನ ಸ್ವಂತ ವಿಶೀಷವಾದ ಆಸ್ತಿಯೆಂದು ಸ್ವಾಧೀನ ಮಾಡಿಕೊಂಡಿದ್ದಾನೆ ಏಕೆಂದರೆ ಸಭಿಕರು ಆತನ ಅಮೂಲ್ಯವಾದ ಗುಣಗಳನ್ನು ತಮ್ಮ ಜೀವನದಲ್ಲಿ ಪ್ರತಿಬಿಂಬಿಸಿ ಆತನ ಒಳ್ಳೆತನ ಮತ್ತು ಕೃಪೆಯನ್ನು ಎಲ್ಲಾ ಜನರಿಗೂ ಪ್ರಚಾರ ಮಾಡಲಿ ಎಂದಾಗಿ. ದಿ ಎಸ್ ಡಿ ಎ ಬೈಬಲ್ ಕಾಮೆಂಟ್ರಿ. ವಾ 7, ಪು 562.

**ಧರ್ಮೋಪದೇಶಕಾಂಡ 7:6–8 ಓದಿರಿ: ಅಬ್ರಹಾಮನ ವಂಶದವರನ್ನು ಆರಿಸಿಕೊಳ್ಳಲು ಪ್ರೇರೇಪಿಸಿದು ಏನು? ಇಂದಿಗೂ ಅದೆ ಹೇಗೆ ಅನ್ವಯವಾಗಿದೆ?**

---

ಇದನ್ನು ನಮ್ಮನ್ನು ನಾವು ಕೇಳಿಕೊಳ್ಳಬೇಕು, ಯಾವ ದೇಶವು ಪರಿಶುದ್ದ ಜನಾಂಗವೆಂದು ಕರೆಸಿಕೊಳ್ಳಲು ಅರ್ಹವಾಗಿದೆ? ಯಾವುದೂ ಇಲ್ಲ. ಎಲ್ಲ ದೇಶಗಳ ಜನಾಂಗದಲ್ಲಿ ದೇವರ ಪ್ರೀತಿ ಮತ್ತು ಕೃಪೆಯನ್ನು ಪಡೆಯಲು ಅರ್ಹತೆ ಇಲ್ಲದ ಜನರು ಇದ್ದಾರೆ. ಪರಿಶುದ್ಧ ಜನಾಂಗವೆಂದು ಸತ್ಯವೇದವು ಕರೆದರೂ ವಾಕ್ಯಗಳು ಇಸರಾಯೇಲ್ಯರನ್ನು ಆರಿಸಿಕೊಂಡು ಸ್ಥಾಪಿಸಲು ಆತನ ಪ್ರೀತಿಯೇ ಕಾರಣವಾಗಿತ್ತು ಎಂದು ಬೋಧಿಸುತ್ತದೆ. ದೇವ ಜನಾಂಗವಾಗಲು ಆತನ ಪ್ರೀತಿಯೇ ಕಾರಣ. ಜನರು ಪಾಪದಿಂದ ಕೂಡಿದಾಗ್ಯು ದೇವರು ಅಬ್ರಹಾಮನಿಗೆ ನೀಡಿದ ವಾಗ್ದಾನವನ್ನು ಕ್ರಿಸ್ತನ ಮೂಲಕ ನೆರವೆರಸಿದನು. ಕ್ರಿಸ್ತನು ಆತನ ಮಕ್ಕಳನ್ನು ರಕ್ಷಿಸಿಸುವನು. ದೇವರು ತನ್ನ ಕೃಪೆಯ ಮೂಲಕ ತನ್ನ ಜನರನ್ನು ಆರಿಸಿಕೊಂಡನೋ ಹಾಗೆಯೇ ಅವರಿಗೆ ಕೃಪೆಯ ಮೂಲಕ ರಕ್ಷಣೆಯು ಸಿಗಿವುದು.

**ನಮಗೋಸ್ಕರ ನಾವು ಏನು ಮಾಡಿದ್ದೇವೋ ಅದರ ಮೇಲೆ ಅಲ್ಲ ಆದರೆ ಯೇಸು ಕ್ರಿಸ್ತನು ನಮಗೋಸ್ಕರ ಏನು ಮಾಡಿದ್ದನೋ ಅದರ ಎಲೆ ನಮ್ಮಗೆ ರಕ್ಷಣೆ ಸಿಗುವುದು ಎಂಬ ಪವಿತ್ರ ಸತ್ಯವನ್ನು ನಮ್ಮ ಮುಂದೆ ಯಾಕೆ ಇಟ್ಟುಕೊಳ್ಳಬೇಕು?**

**ಸೋಮವಾರ** **ನವೆಂಬರ್ 5**

**ದೇವ ಕುಟುಂಬದವರು**

ಹೊಸ ಒಡಂಬಡಿಕೆಯಲ್ಲಿ ಮತ್ತೊಂದು ಚಿತ್ರಣವೆಂದರೆ ದೇವರ ಮನೆಯವರು ಅಥವಾ ಕುಟುಂಬದವರು. ಅದು ಕಲ್ಲು ಮತ್ತು ಕಟ್ಟಡದ ರೂಪಕವಾಗಿದೆ. ತೊಡಕಾದ

ಮತ್ತು ಪರಸ್ಪರ ಆಶ್ರಿತವಾದ ಸಭೆಯೊಂದಿಗಿನ ಮಾನವ ಸಂಬಂಧವಾಗಿದೆ "ಜೀವಂತ ಕಲ್ಲುಗಳು" ಎಂದು ಪೇತ್ರನು ಕ್ರೈಸ್ತರನ್ನು ಹೋಲಿಸಿದ್ದಾನೆ ಅದು ಶಾಶ್ವತವಾದ ಗುಣ ಮತ್ತು ಗಟ್ಟಿತನಕ್ಕೆ ಹೋಲಿಕೆಯಾಗಿದೆ.

ಎಫೆ 2:19–22 ಓದಿರಿ: ಈ ವಾಕ್ಯವೊಂದರಲ್ಲಿ ಪೌಲನು ಏನನ್ನು ಒತ್ತಿ ಹೇಳುತ್ತಾನೆ? ಈ ಚಿತ್ರಣವು ಸಭೆಯ ಐಕ್ಯತೆ ಬಗ್ಗೆ ಏನು ತಿಳಿಸುತ್ತದೆ?

____________________________________________

____________________________________________

ಈ ವಾಕ್ಯವೃಂದದಲ್ಲಿ ಸಭೆಯ ಎರಡು ಚಿತ್ರಣವನ್ನು ಒಂದುಗೂಡಿಸಿ ಒಂದು ಅಚಲವಾದ ಮನೆ ಅಥವಾ ಕಟ್ಟಡ ಇನ್ನೊಂದು ಜೀವಂತ ಮನೆಯ ಮಂದಿ.

ಕಲ್ಲೊಂದಕ್ಕೆ ಯಾವ ಬೆಲೆ ಇಲ್ಲ ಆದರೆ ಬೇರೇ ಕಲ್ಲುಗಳೊಂದಿಗೆ ಬೆರೆತು ಅದು ಕಟ್ಟಡವಾಗಿ ಜೀವನದಲ್ಲಿ ಯಾವುದೇ ಬಿರುಗಾಳಿಯನ್ನು ಎದುರಿಸುತ್ತದೆ ಯಾವ ಕ್ರಿಸ್ತನು ಒಂಟಿಯಾಗಿ ಕಲ್ಲು ಅಲ್ಲ ಆದರೆ ದೇವ ಜನರೊಂದಿಗೆ ಅನ್ಯೋನ್ಯತೆಯಿಂದ ಇದ್ದಾಗ ಮಾತ್ರ ಸಾಧ್ಯ. ಕಟ್ಟೆಯಾಗಿ ನಿಲ್ಲಲ್ಲು ದೃಢವಾದ ಅಡಿಪಾಯ ಇರಬೇಕು, ಆ ಅಡಿಪಾಯ ಯೇಸು ಕ್ರಿಸ್ತನು ಮತ್ತು ದೇವಾಲಯದ ಮೂಲೆಗಲ್ಲಾಗಿದ್ದಾನೆ (1 ಕೊ 3:11) ಕ್ರಸ್ತನನನು ಸಭೆಯು ಅದರ ಮೂಲೆಗಲ್ಲನ್ನಾಗಿ ಮಾಡಿಕೊಳ್ಳದಿದ್ದರೆ ಅದು ಉಳಿಯುವುದಿಲ್ಲ ಸಭೆಯೆಂದರೆ ಯೇಸು ಕ್ರಿಸ್ತನು, ಆತನ ಜೀವನ; ಮರಣ, ಮತ್ತು ಪುನರುತ್ಥಾನ ನಂಬಿಗಸ್ತ ಸಮುದಾಯವಾಗಿ ಅವರು ಒಂದೂಗೂಡಿ ಜಗತ್ತಿಗೆ ಶುಭವಾರ್ತ ಸಾರುತ್ತಾರೆ ಸಭೆಯು ಎಂದರೆ ಯೇಸು ಕ್ರಿಸ್ತನು ಆತನು ಯಾರು, ಆತನು ನಮಗೋಸ್ಕರ ಏನು ಮಾಡಿದ್ದಾನೆ, ನಮ್ಮಲ್ಲಿ ಏನು ಮಾಡಬಲ್ಲ. ಆತನನ್ನು ಯೆಹೋವನು ರಕ್ಷಕನು ಎಂದು ಅಂಗೀಕರಿಸಿದವರಿಗೆ ಏನನ್ನು ನೀಡುತ್ತಾನೆ.

ಮನೆ ಜನರ ಚಿತ್ರಣವು ಬಹಳ ಅರ್ಥಗರ್ಭಿತವಾಗಿದೆ. ಮನೆಯ ಜನರು ತಮ್ಮತಮ್ಮೊಂದಿಗಿನ ಸಂಬಂಧಗಳ ಮೇಲೆ ಆಧಾರಿತವಾಗಿದೆ. ತಂದೆ ತಾಯಿ , ಸಹೋದರ ಸಂಬಂಧಗಳ ಚಿತ್ರಣವಾಗಿದೆ. ಕುಟುಂಬದ ಸದಸ್ಯರೊಂದಿಗೆ ಸಂಬಂಧ ಗಟ್ಟಿಯಾಗಿರುತ್ತದೆ. ಅವರು ನಿಷ್ಠೆಯಿಂದಿರುತ್ತಾರೆ. ಐಕ್ಯತೆಯಿಂದಿರಲು ನಿಷ್ಠೆಯು ಬಹಳ ಮೂಖ್ಯವಾದದ್ದು. ನಿಷ್ಠೆಯಿಲ್ಲದಿದ್ದರೆ ಐಕ್ಯತೆ ಇರುವುದಿಲ್ಲ.

ಈ ಚಿತ್ರಣ ಸಭೆಗೆ ಹೇಗೆ ಹೋಲಿಕೆಯಾಗಿದೆ? ಸಭೆಯ ಸಭಿಕರು ಸಹ ಒಂದು ದೊಡ್ಡ ಕುಟುಂಬವಾಘಿದೆ ಸಂಬಂಧಿಗಳಾಗಿದ್ದೇವೆ. ಅದಾಮನ ವಂಶದವರಾಗಿ ನಾವು ಮಾನವ ಕುಟುಂಬದವರಲ್ಲದೆ ನಾವು ಯೇಸುವಿನ ಸಂಬಂಧಿಗಳು ಸಹ ಆಗಿದ್ದೇವೆ. ಎರಡನೇ ಆದಾಮನಾದ ಯೇಸುವಿನೊಂದಗೆ ಹೊಸ ಜನ್ಮ ಪಡೆದ

ಅನಿಭವದ ಮೂಲಕ ಮತ್ತು ಪರಿವರ್ತನೆಗೊಂಡು ಯೇಸುವಿನ ಹೊಸ ಜೀವನದ ಮೂಲಕ.

**ದುಃಖಕರವೆಂದರೆ ಕೆಲವರು ಅವರವರ ಕುಟುಂಬದಲ್ಲಿ ಅವರಿಗೆ ಒಳ್ಳೆಯ ಅನುಭವಗಳಾಗಿಲ್ಲ. ಇಲ್ಲಿಯ ಚಿತ್ರಣವು ಅಷ್ಟೇನು ಅವರಿಗೆ ಅನ್ವಯಿಸುವುದಿಲ್ಲ. ಇಂಥವರಿಗೆ ಸಭೆಯಾಗಿ ಹೇಗೆ ನಾವು ಕುಟುಂಬದವರಾಗಿರಬಹುದು.**

**ಮಂಗಳವಾರ ನವೆಂಬರ್ 6**

**ಪವಿತ್ರಾತ್ಮನ ಆಲಯ**

ಪೌಲನು ಮತ್ತೊಂದು ಕಟ್ಟಡದ ಚಿತ್ರಣ ನೀಡುತ್ತಾನೆ, ಅದೇನೆಂದರೆ ದೇವರ ಆಲಯ ಅಥವಾ ಪವಿತ್ರಾತ್ಮನ ಆಲಯ. ಅದು ದುಬಾರಿ ಮತ್ತು ಬೆಲೆಬಾಳುವ ಕಟ್ಟಡವಾಗಿದೆ. 1ಕೋ 6:19 ವಾಕ್ಯದಲ್ಲಿ ನಿಮ್ಮ ದೇಹವು ಪವಿತ್ರಾತ್ಮನಿಗೆ ಗರ್ಭಗುಡಿಯಾಗಿದೆ ಎಂದು ತಿಳಿಸಿದೆ. ಪೌಲನು 1ಕೊ 3:16,17. ಈಚಿತ್ರಣವನ್ನು ದೇವರ ಆಲಯವು ಪವಿತ್ರವಾದದ್ದು ಆ ಆಲಯವು ನೀವೇ ಎಂದು ಹೇಳುತ್ತಾನೆ.

**1 ಕೊರಿಂಥ 3:16–17 ಓದಿರಿ: ಸಭೆಯು ಪವಿತ್ರಾತ್ಮನ ಆಲಯವಾಗಿದೆ ಎಂಬುದರ ಅರ್ಥವೇನು? 17ನೇ ವಾಕ್ಯದಲ್ಲಿ ಯಾವ ಎಚ್ಚರಿಕೆಯನ್ನು ನೀಡಲಾಗಿದೆ?**

________________________________________________

________________________________________________

ಪೌಲನು ಸಭೆಯನ್ನು ದೇವಾಲಯದ ಕಟ್ಟಡಕ್ಕೆ ಹೋಲಿಸಿಲ್ಲ ಅಥವಾ ದೇವರು ನೆಲೆಸುವ ಸ್ಥಳವಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾನೆ. ಹೊಸ ಒಡಂಬಡಿಕೆಯ ಗ್ರೀಕರು ವ್ಯತ್ಯಾಸವನ್ನು ನೀನು ಎಂಬುದು ಏಕ ವ್ಯಕ್ತಿಗೆ ಹೋಲಿಕೆಯಾಗಿದೆ, ನೀವು ಎಂದು ಅನೇಕ ಜನರಿಗೆ ಹೋಲಿಕೆ ಮಾಡಿದ್ದಾರೆ. ಕೊರಿಂಥದ ಕ್ರೈಸ್ತರು ಜೊತೆ ಸೇರಿ ಪವಿತ್ರಾತ್ಮನಿಗೆ ಆಲಯವಾಗಿದ್ದಾರೆ. ಆತ್ಮೀಕ ಅರ್ಥದಲ್ಲಿ ದೇವರು ಅವರೊಂದಿಗೆ ನೆಲೆಸುತ್ತಾನೆ ಎಂಬುದು.

ಪೌಲನ ಪ್ರಕಾರ ದೇವರು ಕ್ರೈಸ್ತರ ಅನ್ಯೊನ್ಯತೆಯಲ್ಲಿ ನೆಲೆಸುತ್ತಾನೆ. ಹಾಗಾಗಿ ಯಾರಾದರೂ ಈ ಅನ್ಯೊನ್ಯತೆಯನ್ನು ಕೆಡಿಸಿದರೆ ಅವರು ನ್ಯಾಯ ವಿಚಾರಣೆಗೆ ಗುರಿಯಾಗುವರು. ನಂಬಿಗಸ್ತರ ಜನರ ಐಕ್ಯತೆಯು ಅನ್ಯೊನ್ಯತೆಯ ಮತ್ತು ಆಲಯದಲ್ಲಿ ದೇವರ ಪ್ರಸನ್ನತೆಯು ಸ್ಥಳವಾಗಿದೆ. ಈ ವಾಕ್ಯವು ನಮ್ಮ ದೇಹವನ್ನು

ಕಾಪಾಡಿಕೊಳ್ಳುವುದರ ಬಗ್ಗೆ ತಿಳಿಸುತ್ತದೆ, ಆದರೆ ಪೌಲನು ಅದನ್ನು ಹೇಳುತ್ತಿಲ್ಲ. ಆದರೆ ಸಭೆಯ ಐಕ್ಯತೆಯನ್ನು ಹಾಳು ಮಾಡುವುದರ ಬಗ್ಗೆ ಎಚ್ಚರವಾಗಿರಿ ಎಂದು ಹೇಳುತ್ತಾನೆ.

ಈ ಪಾಠದಲ್ಲಿ ಹಿಂದೆಯೇ ತಿಳಿಸಿದಂತೆ ಪೌಲನು ಐಕ್ಯತೆಗೆ ಏನೆಲ್ಲ ಅಡೆ ತಡೆಗಳು ಬರುವವು ಎಂಬುದರ ಬಗ್ಗೆ ಉಲ್ಲೇಖಿಸುತ್ತಾನೆ. ನಿಮ್ಮೊಳಗೆ ಹೊಟ್ಟೆ ಕಿಚ್ಚು, ಜಗಳಗಳು ಇರುವಲ್ಲಿ (1ಕೊ 3:3) ಇಂಥಹ ಸ್ವಭಾವಗಳು ಕ್ರೈಸ್ತರ ಐಕ್ಯತೆಗೆ ನಿಜವಾದ ಅಪಾಯಕಾರಿ. ಅದು ಆಲಯದಲ್ಲಿ ದೇವರ ಪ್ರಸನ್ನತೆ ಇಲ್ಲದಂತೆ ಮಾಡುವುದು. ಸಭೆಯ ಜಗಳಗಳು ದೇವರ ಆಲಯವನ್ನು ಹಾಳುಮಾಡುತ್ತವೆ ಹಾಗಾಗಿ ಸಭಿಕರು ಐಕ್ಯತೆಗೆ ಅಪಾಯಕಾರಿಯಾದ ಇಂಥ ಸ್ವಾಭಾವಗಳನ್ನು ಬಿಡಬೇಕು. ಇಂಥ ಜಗಳಗಳು ಸಭೆಯಲ್ಲಿ ಆದಾಗ ಕೊರಿಂಥದವರಿಗೆ ಪೌಲನ ಬುದ್ಧಿವಾದವು ಇಂದಿಗೂ ಅನ್ವಯವಾಗುತ್ತದೆ.

ಸಹೋದರರೇ , ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು, ನಿಮ್ಮಲ್ಲಿ ಭೇದಗಳಿಬಾರದು, ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಾಗಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. (1ಕೊ 1:10)

**ಹೊಟ್ಟೆ ಕಿಚ್ಚು, ಜಗಳಗಳು ಈ ಸಮಸ್ಯೆಗಳು ಪೌಲನ ಕಾಲದಲ್ಲಿ ಮಾತ್ರ ಎದು-ರಿಸಿದವುಗಳಲ್ಲ, ಇಂದಿಗೂ ಸಹ ಇಂಥ ಸಮಸ್ಯಗಳು ಎದುರುಸುತ್ತೇವೆ. ಐಕ್ಯತೆಗೆ ಸಮಸ್ಯೆಗಳು ಅಪಾಯುವಾಗದಂತೆ ನಾವು ಪ್ರತಿಯೊಬ್ಬರು ಹೇಗೆ ಎಚ್ಚರ ವಹಿಸಬೇಕು?**

**ಬುಧವಾರ** **ನವೆಂಬರ್** 7

**ಕ್ರಿಸ್ತನ ದೇಹ**

ಬಹುಶ ನಮ್ಮೆಲರಿಗೂ ಗೊತ್ತಿರುವ ಹಾಗೆ ಸಭೆಯು ಬೇರೆ ಬೇರೆಯವ-ರಿಂದ ಒಂದಾಗಿ ಕ್ರಿಸ್ತನ ದೇಹದಲ್ಲಿ ಐಕ್ಯವಾಗಿದೆ. ಹೇಗೆ ದೇಹವೂ ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ ಹಾಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೇ ಹಾಗೆಯೇ ಕ್ರಿಸ್ತನು (1ಕೊ 12:12) ಹೇಗೆ ದೇಹವು ಬೇರೆ ಬೇರೆ ಕೆಲಸಮಾಡುವ ಜವಬ್ದಾರಿ ಹೊಂದಿದೆ ಇದೇ ಕ್ರಿಸ್ತನ ಧೇಹವಾದ ಸಭೆಯಾಗಿದೆ.

**1ಕೊ 12:12–26 ಓದಿರಿ: ಅನೇಕ ಅಂಗಗಳೊಳಗೊಂಡ ಈ ದೇಹದ ಚಿತ್ರಣವು**

**ನಮ್ಮ ಸ್ಥಳೀಯ ಸಭೆಗೆ ಹೇಗೆ ಅನ್ವಯವಾಗುತ್ತದೆ? ಜಗತ್ತಿನಾದ್ಯಂತ ಸವೆಂತ್–ಡೇ–ಅಡ್ವೆಂಟಿಸ್ಟ್ ಸಭೆಗೆ ಹೇಗೆ ಅನ್ವಯಿಸುತ್ತದೆ?**

––––––––––––––––––––––––––––––––––––––––––––––––

––––––––––––––––––––––––––––––––––––––––––––––

1 ಕೊ 12ರಲ್ಲಿ ಪೌಲನ ಬೊಧನೆಯು ಕ್ರೈಸ್ತರು ವಿವಿಧತೆಯಲ್ಲಿ ನಿಜವಾದ ಐಕ್ಯತೆ ಮಾತ್ರವಲ್ಲ ನಿಶ್ಚಯವಾಗಿ ಏಕತೆಯನ್ನು ಅಲಕ್ಷ್ಯ ಮಾಡದೆ, ಆದರೆ ವಿವಧತೆ ಮುಖಾಂತರ ಐಕ್ಯತೆಯಲ್ಲಿ ಇದ್ದಾರೆ. ಹೇಗೆ ಮಾನಬ ದೇಹವು ಅದ್ಭುತಕರವಾಗಿ ಒಂದಾಗಿ ರಚಿಸಲ್ಪಟ್ಟು ಮತ್ತು ಆಶ್ಚರ್ಯಕರವಾಗಿ ಅಂಗಗಳು ಅನೇಕವಾಗಿವೆ ಹಾಗೆಯೇ ಕ್ರಿಸ್ತನ ದೇಹವು ಅದರ ಮುಖಾಂತರ ವಿವೆಧತೆಯು ಕ್ರಿಸ್ತನ ದೇಹದ ಪರಿಪೂರ್ಣತೆಯನ್ನು ಮತ್ತು ಅದರ ವೈಭವವನ್ನು ತಿಳಿಯ ಪಡಿಸುತ್ತದೆ.

ಈ ಚಿತ್ರಣವು ನೇರವಾಗಿ ಸಭೆಯಾಗಿ ನಮಗೆ ತಿಳಿಸುತ್ತದೆ. ಕಳೆದ ಹಲವು ದಶಕಗಳಲ್ಲಿ ಸವೆಂತ್–ಡೇ–ಅಡ್ವೆಂಟಿಸ್ಟ್ ಸಭೆಯು ಬಹು ಮಟ್ಟಿಗೆ ಎಲ್ಲ ತರದ ಹಿನ್ನಲೆ ಸಂಸ್ಕ ತಿ ಮತ್ತು ಪರಿಸರಗಳಿಂದ ಬಂದ ಜನರಿಂದ ಕೂಡಿದ ಸಭೆಯಾಗಿದೆ. ನಮ್ಮ ಜನಾಂಗೀಯ ಸಂಸ್ಕೃತಿ, ಶಿಕ್ಷಣ, ವಯಸ್ಸೀನ ವ್ಯತ್ಯಾಸವು ಕ್ರಿಸ್ತನಲ್ಲಿ ಒಂದಾಗಿದ್ದೇವೆ ಎಂಬುದು ಸತ್ಯವು ನಮ್ಮ ವಿವಿಧತೆಯಲ್ಲಿಯೂ ತಿಳಿದಿದೆ.. ನಾವು  ಯಾರೋ ಆಗಿದ್ದರೂ ಎಲ್ಲಿಂದಾದರೂ ಬಂದಿದ್ದರೂ.

ನಾವು ನೋಡಿದ ಹಾಗೆ ಶಿಲುಬೆಯ ಅಡಿಯಲ್ಲಿ ನಾವೆಲ್ಲರೂ ಸಮಾನರು. ನಮ್ಮ ಸುತ್ತ ಮುತ್ತಲ ಜಗತ್ತು ಚೂರು ಚೂರಾದರೂ, ವಿವಿಧತೆಯಲ್ಲಿ ನಾವು ಐಕ್ಯತೆಯಿಂದ ಇರಬಹುದು ಎಂಬುದನ್ನು ಸಭೆಯು ತೋರಿಸಬೇಕು. ದೇವ ಜನರು ಸುವಾರ್ತೆಯ ಗುಣ ಪಡಿಸುವ ಮತ್ತು ಮರು ಮೈತ್ರಿಯನ್ನು ಮಾಡುವ ಶಕ್ತಿ ತೋರಿಸಬೇಕು.

ಆಶ್ಚರ್ಯಕರವಾಗಿ ಪೌಲನು ಈ ಆದರ್ಶವನ್ನು ಹೇಗೆ ಸಾಧಿಸಬಹುದೆಂದು ಹೇಳುತ್ತಾನೆ. ಕ್ರಿಸ್ತನ ಸಭೆಗೆ ತಲೆಯಾಗಿರುವ ಪ್ರಕಾರವೇ ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು (ಕೊಲೊ 1:18). ಪ್ರತಿಯೊಬ್ಬ ನಂಬಿಗಸ್ತನಿಗೆ ಕ್ರಿಸ್ತನಲ್ಲಿ ಆತ್ಮೀಕವಾದ ಸಂಬಂಧವಿರುತ್ತದೆ. ಹಾಗಾಗಿ ದೇಹವು ಅದೇ ಆಹಾರದಿಂದ ಪುನಃಶ್ಚೇತನಗೊಳ್ಳುವುದು. ದೇವರ ವಾಕ್ಯವನ್ನು ಅಧ್ಯಾಯನ ಮಾಡುವುದಕ್ಕೆ ಅಷ್ಟು ಹೆಚ್ಚು ಒತ್ತುಕೊಡದೆ ವಾಕ್ಯವನ್ನು ಓದಿ ತಿಳಿದುಕೊಂಡು ಅದಕ್ಕೆ ವಿಧಯರಾಗಿ ನಡೆದು ಕೊಳ್ಳುವುದನ್ನು ಕಲಿಯಬೇಕು, ಮತ್ತು ಕ್ರಿಸ್ತನ ದೇಹದಲ್ಲಿ ಐಕ್ಯರಾಗಿ ಪ್ರಾರ್ಥಿಸಿ ಆರಾಧಿಸುವ ಅನುಭವ ನಮ್ಮಗಾಗಬೇಕು.

**ಗುರುವಾರ** **ನವೆಂಬರ್ 8**

## ಕುರಿಗಳು ಮತು ಕುರುಬನು

**ಯೋಹಾನ 10:1–11ವರೆಗೆ ಓದಿರಿ: ಸಭೆಯ ರೂಪಕಾಲಂಕಾರವಾಗಿ ಕುರಿಮಂದಿ ಐಕ್ಯತೆಯ ಬಗ್ಗೆ ಏನನ್ನು ತಿಳಿಸುತ್ತದೆ?**

–––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––––

ಮಹಾನಗರಗಳ ಈ ಆಧುನಿಕೆ ಜಗತ್ತಿನಲ್ಲಿ ಯಾವುದೇ ತರದ ಪ್ರಾಣಿ ಸಾಕಾಣಿಕೆಯು ಕಡಿಮೆಯಾಗುತ್ತಿದೆ. ಕುರಿ ಮತ್ತು ಕುರುಬನ ಸಂಬಂಧಗಳ ಬಗ್ಗೆ ಅನೇಕರಿಗೆ ಅಷ್ಟೇನು ಗೊತ್ತಿರುವುದಿಲ್ಲ. ಯೇಸುವು ಸಾಮ್ಯವನ್ನು ಜನರಿಗೆ ಹೇಳಿದಾಗ ಜನರು ಅರ್ಥಮಾಡಿಕೊಂಡರು. ನಾನೇ ಒಳ್ಳೇ ಕುರುಬನು ಎಂದು ಆತನು ಹೇಳಿದಾಗ ತಕ್ಷಣ ಅವರು ಗುರುತಿಸಿದರು ಮತ್ತು ಗೌರವಿಸಿದರು. ಕೀರ್ತನೆ 23:1 ಯೆಹೋವನು ನನಗೆ ಕುರುಬನು: ಈ ಚಿತ್ರಣವು ಸ್ಪಷ್ಟವಾಗಿತ್ತು ಮತ್ತು ಭಾವನಾತ್ಮಕ ಮೌಲ್ಯದಿಂದ ಶೋಭಾಯಮಾನವಾಗಿದೆ. ಪುರಾತನ ಕಾಲದ ಸಂಸ್ಕೃತಿ ಇಂದಿಗೂ ಮಧ್ಯ ಪೂರ್ವಭಾಗದಲ್ಲಿ ಕುರುಬನು ತನ್ನ ಕುರಿಯನ್ನು ನೋಡಿಕೊಳ್ಳುವದರಲ್ಲಿ ಎಂಥ ಕಷ್ಟ ಬಂದರು ಸಮರ್ಪಣೆಯಾಗಿರಬೇಕು. ಕುರುಬನು ಎಂಬ ಚಿತ್ರಣವು ಸತ್ಯವೇದದಲ್ಲಿ ಆತ್ಮೀಯವಾದದ್ದು. ಅದು ದೇವರು ಮತ್ತು ಆತನ ಮಕ್ಕಳೊಂದಿನ ಸಂಬಂಧದ ಬಗ್ಗೆ ತಿಳಿಸುತ್ತದೆ.

ಕುರಿಗಳು ಎಂಬ ದೇವರ ಮಕ್ಕಳ ಚಿತ್ರಣವು ಒಂದು ಕುತೂಹಲಕಾರಿ ಚಿತ್ರಣವಾಗಿದೆ. ಕುರಿಗಳು ಎಂದಾಕ್ಷಣ ಅವುಗಳು ಸಾಧು ಗುಣ ನಮ್ಮಗೆ ನೆನಪಾಗುವುದು. ಹಾಗಾಗಿ ಅವುಗಳು ತಮ್ಮ ರಕ್ಷಣೆ ಮತ್ತು ಮಾರ್ಗದರ್ಶನಕ್ಕಾಗಿ ಕುರುಬನನ್ನು ಆತುಕೊಂಡಿರುತ್ತವೆ. ಕೆಲವೊಮ್ಮೆ ಅವುಗಳು ಮೂರ್ಖಪ್ರಾಣಿಯಂತೆ ದಾರಿ ತಪ್ಪಿ ಕಳೆದು ಹೋಗುತ್ತವೆ. ಕುರುಬನು ಹೋಗಿ ಆ ಕಳೆದುಹೋದ ಕು–ರಿಯನ್ನು ಹಿಂದಕ್ಕೆ ತರುತ್ತಾನೆ. ಕುರಿಮರಿಗಳನ್ನು ಎತ್ತಿಕೊಂಡು ಅವುಗಳಿಗೆ ಹೆಚ್ಚು ಗಮನ ಹರಿಸಬೇಕಾಗುತ್ತದೆ. ಕುರಿಗಳನ್ನು ನೋಡಿಕೊಳ್ಳಲು ತಾಳ್ಮೆ ಮತು ತಿಳುವಳಿಕೆ ಬೇಕಾಗುತ್ತದೆ, ಅನೇಕ ರೀತಿಯಲ್ಲಿ ಸಭೆಯನ್ನು ಪ್ರತಿನಿಧಿಸಲು ಇದು ತಕ್ಕ ಚಿತ್ರಣವಾಗಿದೆ. ಸಭಿಕರು ಭಯಪಡಬೇಕಾದ ಅವಶ್ಯಕತೆಯಿಲ್ಲ ಕುರುಬನೋದಿಗಿನ ಸಂಬಂಧದಿಂದ ಎಲ್ಲವನ್ನು ಪಡೆದುಕೊಳ್ಳುತ್ತಾನೆ.

ಕುರಿಗಳು ಕುರುಬನ ಧ್ವನಿಯನ್ನು ಕೇಳಬೇಕು ಎಂದು ಈ ಸಾಮ್ಯದಲ್ಲಿ ಯೇಸು ಒತ್ತಿ ಹೇಳುತ್ತಾನೆ. ಕೆಲವು ಸಂದರ್ಭಗಳಲ್ಲಿ ಕೆಲ ಕುರಿ ಹಿಂಡನ್ನು ರಕ್ಷಿಸಿ ಒಂದೇ ಕುರಿ ಹಟ್ಟಿಯಲ್ಲಿ ಹಾಕಬಹುದು. ಹೇಗೆ ಆ ಕುರಿ ಹಿಂಡನ್ನು ಬೇರ್ಪಡಿಸಬಹುದು. ಕುರುಬನು ಹಟ್ಟಿಯ ಬಾಗಿಲಲ್ಲಿ ನಿಂತು ತನ್ನ ಕುರಿಗಳನ್ನು ಕರೆಯಬೇಕು ಆ ಧ್ವನಿಯನ್ನು ಗುರುತು ಹಿಡಿದು ಆತನ ಕುರಿಗಳು ತನ್ನ ಬಳಿಗೆ ಬರುವುವು.

ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ, ಸ್ವಂತ ಕುರಿಗಳನ್ನು ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ, ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ (ಯೋಹಾನ 10:4). ಸಭೆಯು ತನ್ನ ಕುರುಬನ ಧ್ವನಿ ಕೇಳುವುದು ಅಗತ್ಯವಾಗಿದೆ. ದೇವರ ಮಕ್ಕಳ ಐಕ್ಯತೆಯು ಮತ್ತು ಸುರಕ್ಷತೆಯು ಆತನ ಧ್ವನಿ ಕೇಳಿ ವಿಧೇಯರಾಗಿರುವುದರ ಮೇಲೆ ಆಧಾರವಾಗಿದೆ.

**ಜನರು ಸಾಮಾನ್ಯವಾಗಿ ತಮ್ಮನ್ನು ಕುರಿಗಳಿಗೆ ಹೋಲಿಕೆ ಮಾಡುವುದನ್ನು ಇಷ್ಟಪಡುವುದಿಲ್ಲ. ಆದಾಗ್ಯು ಅಂಥ ರೂಪಕಾಲಂಕಾರವು ನಮಗೆ ಬಳಸುವುದು ಯುಕ್ತವಾಗಿದೆ. ನಮಗೆ ಕುರುಬನ ಅಗತ್ಯವಿದೆ ಮತ್ತ ನಾವು ಆತನ ಧ್ವನಿ ಕೇಳಿ ವಿಧೇಯರಾಗಬೇಕು ಎಂಬುವದಕ್ಕೆ ಈ ಚಿತ್ರಣವು ಏನು ತಿಳಿಸುತ್ತದೆ?**

**ಶುಕ್ರವಾರ** **ನವೆಂಬರ್ 9**

**ಎಲ್ಲೆನ್ ಜಿ ವೈಟ್ 'ದಿ ಡಿವೈನ್ ಶೆಫರ್ಡ್' ಪು. 476–484 ಮತ್ತು ' ದಿ ಡಿಸೈರ್ ಆಫ್ ಏಜಸ್' ಪು. 240–243 ಮತ್ತು 'ಕೌನ್ಸಿಲ್ಸ್ ಫಾರ್ ದಿ ಚರ್ಚ್'**

ಯೆರೂಸಲೇಮಿನ ದೇವಾಲಯ ಮತ್ತು ವ್ಯಾಪಕವಾಗಿ ಗ್ರೀಕ್–ರೋಮನ್ ವ್ಯವಸ್ಥೆಯಲ್ಲಿ ಉಪಯೋಗದಲ್ಲಿದ್ದ ದೇವಾಲಯ ಎಂಬ ಪದ ಜನರ ಮನಸ್ಸಿನಲ್ಲಿ ಗಂಭೀರ ದೈವೀಕತೆ ಮತ್ತು ಪೂಜ್ಯ ಭಾವ ಮೂಡಿಸುತ್ತಿತ್ತು. ಹೊಸ ಒಡಂಬಡಿಕೆಯ ಗ್ರಂಥ ಕರ್ತರು ವಿಶ್ವಾಸಿಗಳ ಮನಸ್ಸಿನಲ್ಲಿ ಅದೇ ಗಂಭೀರ ಧ್ಯವೀಕತೆಯ ಭಾವನೆ ಮೂಡಲೆಂದು ದೇವಲಯವನ್ನೆ ರೂಪಕವಾಗಿ ಉಪಯೋಗಿಸಿದ್ದಾರೆ. ಬೇಳೆಯುವ ಸಭೆಯ ಸ್ಥಾಪನೆಯಲ್ಲಿ ದೇವರ ಪಾತ್ರ, ಕ್ರಿಸ್ತನ ಮತ್ತು ಪವಿತ್ರಾತ್ಮನ ನಿರ್ಧಿಷ್ಟ ಕರ್ತವ್ಯಗಳ ಲಕ್ಷಣ ಮತ್ತು ಸಭೆಯೊಳಗಿನ ವಿಶ್ವಾಸಿಗಳ ಅನ್ಯೋನ್ಯತೆ ಒಳಗೊಂಡಿದ ದೇವಾಲಯದ ವಿನ್ಯಾಸ ನಿರ್ಮಾಣ ಸ್ಥಿರ ರೂಪದ್ದಾಗಿದೆ ಎಂಬ ಭಾಸವಾಗುತ್ತದೆ. ಆದರೂ ಹೋಲಿಕೆ ಜೈವೀಕ ಚಿತ್ರಣವಾಗಿದ್ದು ಸ್ಥಿರತೆಯಲ್ಲಿರದೆ ಮುಂದುರದೆ ಕಟ್ಟೋಣ ಪ್ರಕ್ರಿಯೇಯಾಗಿದ

ಎಂದು ಹೊತ್ತಿ ಹೇಳಲ್ಪಟ್ಟಿದೆ. ಒಂದು ನಿರ್ಮಿತವಾಧ ಕಟ್ಟಡದ ಬದಲು ನಿರ್ಮಾಣ ಸ್ಥಿತಿಯಲ್ಲಿರುವ ಕಟ್ಟಡದ ಕಥೆಯು ಚಿತ್ರವನ್ನು ಕಲ್ಪಿಸಿಕೊಳ್ಳಲು ಸೆಳೆಯಲ್ಪಟ್ಟಿದ್ದೇವೆ. ಸಭೆಯು ತನ್ನ ಬದುಕಿನಲ್ಲಿ ದೇವರು ಅದ್ಭುತ್ತವಾಗಿ ಕೊಟ್ಟ್ ಅವಕಾಶ, ತಾನು ಸಜೀವ ದೇವರ ಗರ್ಬಗುಡಿ ಎಂಬುದನ್ನು ದೀನತೆಯಿಂದ ಒಪ್ಪಿಕೊಳ್ಳಬೇಕಾಗಿದೆ(2 ಕೊರಿಂಥ 6:16).

**ಚರ್ಚಿತೆಯ ಪ್ರಶ್ನೆಗಳು:**

1. ಸಭೆಯ ಬಗ್ಗೆ ಸತ್ಯವೇದದ ಚಿತ್ರಣಗಳ ಬಗ್ಗೆ ಚಿಂತನೆ ಮಾಡಿ. ಅವುಗಳಲ್ಲಿ ಯಾವುದು ನಿಮಗೆ ತುಂಬ ಇಷ್ಟ? ಅದಕ್ಕೆಗಿಯೇ ಯಾಕೆ ನೀವು ಆಕರ್ಷಣೆಗೊಂಡಿದ್ದೀರಿ. ಈ ವಾಕ್ಯಗಳಲ್ಲಿಯೂ ಬೇರೆ ರೂಪಕಾಲಂಕಾರವು ಸಭೆಯ ಬಗ್ಗೆ ಈ ವಾಕ್ಯವೃಂದದಲ್ಲಿ ಇವೆ. 1ತಿಮೊ 3:15, 2ತಿಮೊ 2:3–5, 1ಪೇತ್ರ 2:9, ರಲ್ಲಿ ನಮ್ಮಗೆ ಸಿಗುವವು. ಈ ರೂಪಕಾಲಂಕಾರವು ಬೇರೆ ಏನನ್ನು ಸಭೆಯ ಬಗ್ಗೆ ನಮಗೆ ತಿಳಿಸುತ್ತವೆ?

2. ದೇವರು ತನ್ನ ಮಕ್ಕಳು ಕ್ರೈಸ್ತಿಯ ಅನ್ಯೋನ್ಯತೆಯಲ್ಲಿ ಒಂದಾಗಬೇಕು ಎಂದು ಆಶಿಸುತ್ತಾನೆ. ಸಭೆಯು ಉದ್ದಾರವಾಗಬೇಕೆಂದರೆ ಸಹೋದರರೆಲ್ಲರೂ ವಿಶ್ವಾಸದಿಂದಿರುವುದು ಅವಶ್ಯವಾಗಿದೆ. ಧಾರ್ಮಿಕ ಸಂಕಷ್ಟದಲ್ಲಿ ಎಲ್ಲರೂ ಒಂದಾಗಿ ಶ್ರಮಕೈಗೊಳ್ಳಬೇಕು. ಒಂದು ತಪ್ಪಾದ ಹೆಜ್ಜೆ, ಒಂದು ಅಜಾಗರೂಕ ಕ್ರಮವು ಸಭೆಯನ್ನು ಕಷ್ಟಗಳಿಗೆ ಸಿಲುಕಿಸಬಹುದು, ಎಷ್ಟೋ ವರ್ಷಗಳಾದರೂ ಅದರಿಂದ ಹೊರಬರಲು ಅಸಾಧ್ಯವಾಗಬಹುದು. ಎಲೆನ್ ಜಿ ವೈಟ್ "ಟೆಸ್ಟಿಮೋನಿಸ್ ಫಾರ್ ದಿ ಚರ್ಚ್) ಪು 446. ಈ ಎಚ್ಚರಿಕೆಯು ಸಭೆಯ ಐಕ್ಯತೆಯನ್ನು ಕಾಪಾಡಿಕೊಳ್ಳಲು ನಾವು ಎಚ್ಚರವಹಿಸಬೇಕೆಂದು ತಿಳಿಸುತ್ತದೆ. ಈ ಜವಾಬ್ದಾರಿಯಲ್ಲಿ ನಮ್ಮ ಪ್ರತಿಯೊಬ್ಬರ ಪಾತ್ರವೇನಾಗಿರಬೇಕು?

3. ಭಾನುವಾರದ ಅಧ್ಯಾಯನದಲ್ಲಿ ದೇವರ ಮಕ್ಕಳಾದ ನಾವೂ ಸಹ ದೇವರ ಕೃಪೆಯ ಮೂಲಕ ಮಾತ್ರ ನಮಗೆ ರಕ್ಷಣೆ ಉಂಟು ಮತ್ತು ನಮ್ಮ ಯೋಗ್ಯತೆ ಅಥ–ವ ಒಳೆತನದಿಂದಲ್ಲ. ಆದರೆ ನಾವು ಆತನನ್ನು ರಕ್ಷಣೆಗಾಗಿ ಆತುಕೊಂಡ ಕಾರಣ–ಕ್ಕಾಗಿ ನಾವು ದೇವರ ಮಕ್ಕಳಾಗಿದ್ದೇವೆ. ಏಕೆ ಅಥವಾ ಏಕೆ ಇದು ನ್ಯಾಯನಮತ ಹಕ್ಕಾಗಬಾರದು?

**ಸಾರಾಂಶ:** ಹೊಸ ಒಡಂಬಡಿಕೆಯು ಬೇರೆ ಬೇರೆ ರೂಪಕಾಲಂಕರಗಳನ್ನು ಸಭೆಯ ಸ್ವಭಾವ/ಸಹಜಗುಣ ಮತ್ತು ಧ್ಯೇಯ ವಿವರಿಸಲು ಉಪಯೋಗಿಸಿದೆ ಮುಖ್ಯವಾಗಿ ಈ ರೂಪಕಾಲಂಕಾರಗಳು ದೇವರು ತನ್ನ ಮಕ್ಕಳನ್ನು ಎಚ್ಚರಿಕೆಯಿಂದ ಕಾಯುತ್ತಿದ್ದಾನೆ ಮತ್ತು ಕಾಪಾಡುತ್ತಾನೆ. ಈ ಚಿತ್ರಣಗಳು ದೇವರ ಮಕ್ಕಳು ಒಬ್ಬರಿಗೊಬ್ಬರು ಜೋಡಿಸಲ್ಪಟ್ಟಿದೇವೆ ಮತ್ತು ನಾವೆಲ್ಲರೂ ಒಂದುಗೂಡಿ ನಾವು ಯಾವ ಕೆಲಸವನ್ನು ಮಾಡಲು ಕರೆಯಲ್ಪಟ್ಟಿದೇವ್ರೋ ಆ ಕೆಲಸ ಮಾಡಬೇಕು.